<u>2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.</u>

SC. No. 77/2023

| <u>ಫಿರ್ಯಾದಿದಾರರು</u> | <u>ವಿರುದ್ಧ</u> | <u>ಆರೋಪಿತರು</u> |
|---|---|---|
| ರಾಜ್ಯದ ಪರವಾಗಿ ಜಗಳೂರು ಪೊಲೀಸ್ ಠಾಣೆ, ಜಗಳೂರು | | 1. ಕರಿಬಸಪ್ಪ ಮತ್ತು ಇನ್ನೊಬ್ಬರು |

**<u>ದೋಷಾರೋಪಣೆ</u>**

ನಾನು ಶ್ರೀ. ಪ್ರವೀಣ್ ಕುಮಾರ್.ಆರ್.ಎನ್., ಬಿ.ಕಾಂ. ಎಲ್.ಎಲ್.ಬಿ, 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ವಿಶೇಷ ನ್ಯಾಯಾಧೀಶರು , ದಾವಣಗೆರೆ ;-

ಆರೋಪಿತರಾದ- ಎ 1. ಕರಿಬಸಪ್ಪ ತಂದೆ ನಾಗಪ್ಪ.ಎ.ಕೆ., ವಯಸ್ಸು 42 ವರ್ಷ, ವಾಸಃ ಅಣಬೂರು ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ.

ಎ 2. ನಾಗಮ್ಮ ಕೋಂ ರಾಜಪ್ಪ, ವಯಸ್ಸು 31 ವರ್ಷ, ವಾಸಃ ಕೆಚ್ಚೇನಹಳ್ಳಿ ಗ್ರಾಮ, ಜಗಳೂರು ತಾಲ್ಲೂಕು, ದಾವಣಗೆರೆ.

ನಿಮ್ಮ ಮೇಲೆ ಈ ಕೆಳಕಂಡಂತೆ ಆರೋಪವಿಡುತ್ತೇನೆ.

1. ಮೊದಲನೇಯದಾಗಿ, ಮೃತ ಬಸವರಾಜ ಮತ್ತು 2 ನೇ ಆರೋಪಿತನಾದ ನಿನ್ನ ಮಗಳಾದ ವಿನೋದ ಇವರು ಒಬ್ಬರಿಗೊಬ್ಬರು ಪ್ರೀತಿ ಮಾಡುತ್ತಿದ್ದು, ಪ್ರೀತಿಸುವ ವಿಚಾರ ತಿಳಿದು 1 ಮತ್ತು 2 ನೇ ಆರೋಪಿತರಾದ ನೀವು ಪದೇ ಪದೇ ಮೃತ ಬಸವರಾಜನಿಗೆ ಬಾಯಿಗೆ ಬಂದಂತೆ ಬೈದಾಡಿ ವಿನೋದಳಿಗೆ ಪ್ರೀತಿಸುವುದನ್ನು ಬಿಡದಿದ್ದರೆ ಜೀವ ಸಹಿತ ಉಳಿಸುವುದಿಲ್ಲ ಅಂತಾ ಪ್ರಾಣ ಬೆದರಿಕೆಯನ್ನು ಹಾಕಿ ಗಲಾಟೆ ಮಾಡಿದ್ದು, ದಿಃ 03-11-2022 ರಂದು ಮಧ್ಯಾಹ್ನ 2-30 ಗಂಟೆಯಲ್ಲಿ ಬಸವರಾಜನು ಸಾಕ್ಷಿ-4 ರವರ ಜೊತೆ ಜಗಳೂರು ಪಟ್ಟಣಕ್ಕೆ ಹೋದಾಗ ತಾಲ್ಲೂಕು ಸಾರ್ವಜನಿಕ ಆಸ್ಪತ್ರೆಯ ರಸ್ತೆಯಲ್ಲಿ 1 ನೇ ಆರೋಪಿಯಾದ ನೀನು ಅಂಗಡಿಯ ಹತ್ತಿರ ಬಸವರಾಜನಿಗೆ ಲೇ ಸೂಳೇಮಗನೆ ನಿನಗೆ ಎಷ್ಟು ಸಾರಿ ಹೇಳಬೇಕು ವಿನೋದಳ ಸಹವಾಸಕ್ಕೆ ಹೋಗಬೇಡ ಅಂತಾ ಆದರೂ ಅವಳನ್ನು ಮಾತನಾಡಿಸುತ್ತೀಯಾ, ನಿನ್ನನ್ನು ಜೀವ ಸಹಿತ ಬಿಡುವುದಿಲ್ಲ, ಇಲ್ಲಂದ್ರೇ ನೀನೇ ನೇಣು ಹಾಕಿಕೊಂಡು ಸಾಯಲೇ ಸೂಳೇಮಗನೆ ಅಂತಾ ಬೈದಾಡಿದ್ದು, 2 ನೇ ಆರೋಪಿಯಾದ ನೀನು ಬಸವರಾಜನಿಗೆ ಲೇ

ಸೂಳೇಮಗನೆ ನಿನ್ನನ್ನು ಏನು ಮಾಡಬೇಕು ಅಂತಾ ಗೊತ್ತಿದೆ, ನೀನು ಏನಾದ್ರೂ ಮಾಡ್ಕೊಂಡು ಸಾಯಲೇ ಸೂಳೇ ಮಗನೆ ನನ್ನ ಮಗಳ ಸಹವಾಸ ಯಾಕೆ ಬೇಕೋ ನಿನಗೆ ಅಂತಾ ಬಾಯಿಗೆ ಬಂದಂತೆ ಬೈದಾಡಿದ್ದು, ಸಾಕ್ಷಿ-5 ಮತ್ತು 6 ರವರು ಜಗಳ ಬಿಡಿಸಿ ಬಸವರಾಜನಿಗೆ ಸಮಾಧಾನ ಮಾಡಿ ಕಳುಹಿಸಿದ್ದು, ಬಸವರಾಜನು 1 ಮತ್ತು 2 ನೇ ಆರೋಪಿತರಾದ ನೀವು ನೀಡಿದ ಕಿರುಕುಳದಿಂದ ಮನನೊಂದು ದಿಃ 03-11-2022 ರಂದು ರಾತ್ರಿ 9-30 ಗಂಟೆಗೆ ಕೆಚ್ಚೇನಹಳ್ಳಿ ಗ್ರಾಮದ ತನ್ನ ಹೊಸಮನೆಯ ಒಳಗಡೆ ಮೇಲ್ಛಾವಣಿಯ ತೊಲೆಗೆ ಪ್ಲಾಸ್ಟಿಕ್ ಹಗ್ಗದಿಂದ ನೇಣುಹಾಕಿಕೊಂಡಿದ್ದು, ನಂತರ ಬಸವರಾಜನನ್ನು ಜಗಳೂರು ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಮಾರ್ಗ ಮಧ್ಯದಲ್ಲಿ ಬಸವರಾಜ ಮೃತಪಟ್ಟಿದ್ದು, ಆ ಪ್ರಕಾರ ನೀವು ಕಲಂ.306 ಸಹವಾಚನ ಕಲಂ 34 ರ ಭಾರತೀಯ ದಂಡ ಸಂಹಿತೆಯ ಅಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಅಧಿಕಾರ ವ್ಯಾಪ್ತಿಯಲ್ಲಿ ಮಾಡಿರುತ್ತೀರ.

2. ಇಂದು 12 ನೇ ತಾರೀಖು ಮಾರ್ಚ್ ಮಾಹೆ 2025

( ಈ ಮೇಲಿನ ದೋಷಾರೋಪಣೆಯನ್ನು ಆರೋಪಿತನಿಗೆ ಓದಿ, ತಿಳಿಸಿ, ಅವರ ಹೇಳಿಕೆಯನ್ನು ನನ್ನ ಸಮಕ್ಷಮ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK

Digitally signed by PRAVEEN KUMAR RAGHAV NAIK
Date: 2025.03.22 16:00:56 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ , ದಾವಣಗೆರೆ.

SC. No. 77/2023

| ಫಿರ್ಯಾದಿದಾರರು | ವಿರುದ್ಧ | ಆರೋಪಿತರು |
|---|---|---|
| ರಾಜ್ಯದ ಪರವಾಗಿ ಜಗಳೂರು ಪೊಲೀಸ್ ಠಾಣೆ, ಜಗಳೂರು | | 1. ಕರಿಬಸಪ್ಪ ಮತ್ತು ಇನ್ನೊಬ್ಬರು |

ಆರೋಪಿಯ ಹೇಳಿಕೆ

ಪ್ರಶ್ನೆ 1 – ಈಗ ಓದಿ ಹೇಳಿದ ಆಪಾದನೆ ನಿಮಗೆ ತಿಳಿಯಿತೆ?

ಉತ್ತರ -

ಪ್ರಶ್ನೆ 2 – ನೀನು ತಪ್ಪನ್ನು ಒಪ್ಪಿಕೊಳ್ಳುವಿಯೋ ಅಥವಾ ವಿಚಾರಣೆಯಾಗಬೇಕೆ?

ಉತ್ತರ -

(ಆರೋಪಿ ಹೇಳಿಕೆಯನ್ನು ಆತನ ಹೇಳಿಕೆ ಮೇರೆಗೆ ಮತ್ತು ನನ್ನ ಸಮಕ್ಷಮದಲ್ಲಿ ತೆಗೆದುಕೊಳ್ಳಲಾಯಿತು.)

PRAVEEN KUMAR RAGHAV NAIK
Digitally signed by PRAVEEN KUMAR RAGHAV NAIK
Date: 2025.03.22 16:01:05 +0530

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

ದಿನಾಂಕ. 12-03-2025

| ಆರೋಪಿತರ ಹೆಸರು | ಆರೋಪಿತರ ಸಹಿ |
|---|---|
| ಎ1. ಕರಿಬಸಪ್ಪ ತಂದೆ ನಾಗಪ್ಪ.ಎ.ಕೆ., ವಯಸ್ಸು 42 ವರ್ಷ, | |
| ಎ2. ನಾಗಮ್ಮ ಕೋಂ ರಾಜಪ್ಪ, ವಯಸ್ಸು 31 ವರ್ಷ, | |